Indian Journal Of History and Archaeology

INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -4, November-December, 2021,
PageNo,53-58
Peer Reviewed Journal, Referred Journal

IJHA JOURNALS www.IJHA.IN

# ಕ್ಯಾತಮಾರನಹಳ್ಳಿ ಗ್ರಾಮದಲ್ಲಿ ದೊರೆತ ಸ್ಮಾರಕ ಶಿಲ್ಪಗಳು

**ವಿಷಕಂಠಮೂರ್ತಿ.**[1]

ಸಾಂಸ್ಕೃತಿಕ ನಗರಿ ಎಂಬ ಹೆಗ್ಗಳಿಕೆಗೆ ಹೆಸರುವಾಸಿಯಾದ ಮೈಸೂರು ಹಾಗೂ ತಾಲ್ಲೂಕು ಕೇಂದ್ರವಾದ ಮೈಸೂರು, ಸಾಮಾಜಿಕವಾಗಿ ಮತ್ತು ಚಾರಿತ್ರಿಕವಾಗಿ ಹಾಗೂ ಐತಿಹಾಸಿಕವಾಗಿ ಹೆಚ್ಚಿನ ಮಹತ್ವವನ್ನು ಪಡೆದಿದ್ದು, ಈ ಮೈಸೂರು ತಾಲ್ಲೂಕಿನ ಒಂದು ಗ್ರಾಮವಾದ ಕ್ಯಾತಮಾರನಹಳ್ಳಿಯು ಕೇಂದ್ರ ಸ್ಥಾನದಿಂದ ಸುಮಾರು 12 ಕಿ.ಮೀ. ದೂರದಲ್ಲಿ ಕಂಡು ಬರುವ ಗ್ರಾಮವಾಗಿದ್ದು, ಈ ಗ್ರಾಮದಲ್ಲಿ ಮೈಸೂರು ಮಹಾನಗರಪಾಲಿಕೆ ಸಮುದಾಯ ಭವನ ಮುಂಭಾಗದಲ್ಲಿ ಪೂರ್ವ-ಪಶ್ಚಿಮ, ಮತ್ತು ದಕ್ಷಿಣ-ಉತ್ತರಕ್ಕೆ ಹೊಂದಿಕೊಂಡತೆ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಹಾಗೂ ಒಕ್ಕೈ ಮಾಸ್ತಿಗಲ್ಲುಗಳು ದೊರೆತಿದ್ದು ಇವುಗಳ ಚಾರಿತ್ರಿಕ ಹಿನ್ನೆಲೆಯನ್ನು ನಿರೂಪಿಸುವ ಉದ್ದೇಶ ಈ ಲೇಖನದ್ದಾಗಿದೆ.

ವೀರಗಲ್ಲುಗಳು ಎಂದರೆ ನಾಡಿಗಾಗಿ ಮಡಿದ ವೀರನನ್ನು ಸ್ಮಾರಕವಾಗಿ ನಿರ್ಮಿಸುವ ಕಲ್ಲುಗಳಿಗೆ ವೀರಗಲ್ಲು ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ರಾಜರು ಕಾಲದಿಂದ ಕಾಲಕ್ಕೆ ಆಡಳಿತ ನಡೆಸಿರುವುದಕ್ಕೆ ಇತಿಹಾಸ ಎಂಬ ಭಾವನೆ ಪ್ರಚಲಿತವಾಗಿದೆ. ಜನ ಸಾಮಾನ್ಯರು ಬಾಳಿ ಬದುಕಿದ ರೀತಿ, ಅವರು ಅನುಸರಿಸಿದ ಧರ್ಮ, ಬೆಳೆಸಿದ ಕಲೆ, ಅವರವರ ಜೀವನದ ಸಮಸ್ಯೆಗಳು ಈ ರೀತಿಯ ಇತಿಹಾಸವನ್ನು ಒದಗಿಸುವುದರಲ್ಲಿ ವೀರಗಲ್ಲುಗಳು ಅತ್ಯಂತ ಪ್ರಮುಖವಾಗಿರುತ್ತವೆ.

ಯಾವುದೇ ಒಂದು ಯುದ್ಧದಲ್ಲಿ ಹೋರಾಡಿ ಮಡಿದ ವ್ಯಕ್ತಿಯ ಸಮಾಧಿ ಅಥವಾ ಸಂಸ್ಕಾರ ಮಾಡಿದ ನಿರ್ದಿಷ್ಠ ಸ್ಥಳದ ಗುರುತಿಗಾಗಿಯೇ ಕೆಲವರು ತಮ್ಮ ಜೀವನವನ್ನು ತೊರೆದು ಗ್ರಾಮವನ್ನು ಕಳ್ಳರಿಂದ ರಕ್ಷಿಸಿ ಕಳ್ಳರ ಜೊತೆ ಹೋರಾಡಿ ಅಬಲೆಯರ ಮೇಲೆರಗುವಂತಹರವರ ವಿರುದ್ಧ ಹಾಗೂ ತಮ್ಮ ಅರಸರ ಪರವಾಗಿ ಹೋರಾಡಿ ಮಡಿದ ವೀರರ ಸ್ಮರಣಾರ್ಥವಾಗಿ ಹಾಕಿಸಿದ ಕಲ್ಲುಗಳನ್ನು ವೀರಗಲ್ಲುಗಳೆಂದು ಕರೆಯುತ್ತಾರೆ.

---

1. **ಸಂಶೋಧಕರು**.ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮಾನಸಗಂಗೋತ್ರಿ ಮೈಸೂರು.

ವೀರಗಲ್ಲುಗಳು ಸಾಮಾನ್ಯವಾಗಿ ಶಿಲ್ಪದ ಮೂರು ಹಂತಗಳನ್ನು ಒಳಗೊಂಡಿರುತ್ತವೆ. ಮೊದಲನೇ ಹಂತದಲ್ಲಿ ವೀರರು ಶತ್ರುಗಳೊಡನೆ ಹೋರಾಟ ಮಾಡುತ್ತಿರುವ ದೃಶ್ಯ ಶಿಲ್ಪ, ಎರಡನೇ ಹಂತದಲ್ಲಿ ಆತನನ್ನು ಕೈಲಾಸಕ್ಕೆ ಕೊಂಡೊಯ್ಯುತ್ತಿರುವ ಅಪ್ಸರೆಯರನ್ನು ಚಿತ್ರಿಸಿರುವುದು, ಮೂರನೇ ಹಂತದಲ್ಲಿ ಆತನು ದೇವರ ಸಾನಿಧ್ಯದಲ್ಲಿರುವುದನ್ನು ಕಡೆಯಲಾಗಿದೆ. ಇದಕ್ಕೆ ಸಾಕ್ಷಿಯಾಗಿ ವೀರಗಲ್ಲಿನ ಮೇಲ್ಭಾಗದಲ್ಲಿ ಒಂದು ಕಡೆ ಸೂರ್ಯ ಮತ್ತೊಂದು ಕಡೆ ಚಂದ್ರನನ್ನು ಕಂಡರಿಸುತ್ತಾರೆ. ಇಂತಹ ವೀರಗಲ್ಲುಗಳು ಕರ್ನಾಟಕದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಂಡುಬರುತ್ತವೆ. ಕೆಲವು ವೀರಗಲ್ಲುಗಳು ಶಾಸನ ಸಹಿತವಾಗಿ ಮತ್ತು ಶಾಸನ ರಹಿತವಾಗಿ ಕಂಡು ಬರುವುದುಂಟು ಆದರೆ ಶಾಸನಗಳು ಇರಲಿ ಅಥವಾ ಇಲ್ಲದಿರಲಿ ಸಾಮಾನ್ಯವಾಗಿ ವೀರಗಲ್ಲಿನ ಉದೇಶ ಒಂದೇ ಆಗಿರುತ್ತದೆ.

ಪತಿಯೊಡನೆ ಸಹಗಮನ ಮಾಡಿದ ಪತ್ನಿಯರ ಸ್ಮಾರಕಕ್ಕಾಗಿ ನಿಲ್ಲಿಸಿದ ಕಲ್ಲುಗಳನ್ನು ಮಾಸ್ತಿ ಕಲ್ಲು ಅಥವಾ ಮಹಾಸತಿ ಕಲ್ಲು ಎಂದು ಹೇಳಬಹುದು. ಈ ಸತಿ ಅಥವಾ ಸಹಗಮನ ಪದ್ಧತಿ ಸಾರ್ವತ್ರಿಕವಾಗಿರಲಿಲ್ಲ ಹಾಗೂ ಬಲವಂತವೂ ಆಗಿರಲಿಲ್ಲವೆಂಬುದು ಗಮನಿಸಬಹುದಾದ ಸಂಗತಿ ಒಂದು ಕಡೆಯಾದರೆ, ಪತಿಯೇ ಪರದೈವ ಎಂಬ ಭಾವನೆಯಲ್ಲಿ ಬೆಳೆದ ಸ್ತ್ರೀಯು ಪತಿಯ ಮರಣವನ್ನು ಸಹಸಲಾಗದೆ ನಿಷ್ಠೆಯಿಂದ ಆತನನ್ನು ಹಿಂಬಾಲಿಸಿ ಸಹಗಮನವನ್ನು ಪ್ರಾರಂಭಿಸುವುದೇ ಮೂಲವಾಗಿರಬೇಕು.

ಏಕೆಂದರೆ ಯಾವುದೇ ಧರ್ಮ ಶಾಸ್ತ್ರಗಳಲ್ಲಿಯೂ ಬಲತ್ಕಾರದ ಸಹಗಮನಕ್ಕೆ ಒಪ್ಪಿಗೆಯನ್ನು ನೀಡಿಲ್ಲ. ಆದರೂ ಕೆಲವು ಕಡೆಗಳಲ್ಲಿ ಧಾರ್ಮಿಕ ಸ್ವರೂಪ ಒಂದು ಹೆಣ್ಣಿಗೆ ಇಷ್ಟವಿಲ್ಲದಿದ್ದರೂ ಆ ವಿಧಿ ನಡೆಯುತ್ತಿದ್ದಂತೆ ತೋರುತ್ತದೆ. ಕೆಲವು ಸಮಯದಲ್ಲಿ ಪತಿಯ ಸಾವನ್ನು ಕೇಳಿ ಹಲವು ಸ್ತ್ರೀಯರು ಸಹಗಮನ ಮಾಡಿಕೊಳ್ಳುತ್ತಿದ್ದರು. ಗಂಡನು ಯುದ್ಧದಲ್ಲಿಯೇ ಆತ್ಮಬಲಿ ಮಾಡಿಕೊಂಡು ಅಥವಾ ಸ್ವಾಭಾವಿಕವಾಗಿ ಮರಣವನ್ನು ಪಡೆದಿರಬಹುದು. ಪತಿಯು ಯಾವ ಕಾರಣಕ್ಕಾಗಿ ಸತ್ತಿರಬಹುದು ಎಂಬುದನ್ನು ತಿಳಿಯಲು ಶಿಲೆಯಲ್ಲಿರುವ ಶಾಸನ ಪಾಠದಿಂದ ತಿಳಿಯುವುದು ಸುಲಭ ಆದರೆ ಶಾಸನ ಪಾಠವಿಲ್ಲದಿದ್ದರೆ ಕೇವಲ ಶಿಲ್ಪವನ್ನು ನೋಡಿ ನಿರ್ಧರಿಸುವುದು ಬಹಳ ಕಷ್ಟವಾಗುತ್ತದೆ.

ಕೆಲವು ಸಂದರ್ಭಗಳಲ್ಲಿ ಈ ಸ್ಮಾರಕದ ಶಿಲ್ಪಗಳನ್ನು ಗಮನಿಸಿದಾಗ ಅವುಗಳನ್ನು ವೀರಗಲ್ಲುಗಳು ಎಂಬುದಾಗಿ ಗುರುತಿಸಬೇಕೇ ಅಥವಾ ವೀರ ಮತ್ತು ಮಹಾಸತಿ ಇಬ್ಬರಿಗೂ ಸ್ಮಾರಕವಾಗಿದೆಯೇ ಎಂಬುದು ಸಂಶಯಕ್ಕೀಡಾಗುತ್ತದೆ ಇವೆಲ್ಲವುಗಳು ಕೆಲವು ಸಮಯದಲ್ಲಿ ಪ್ರಶ್ನಾತೀತವಾಗಿಯೇ ಉಳಿದುಕೊಂಡಿವೆ ಇಂತಹ ಮಹಾಸತಿ ಕಲ್ಲುಗಳು ಕ್ಯಾತಮಾರನಹಳ್ಳಿಯಲ್ಲಿ ದೊರೆತಿರುವುದು ನಿಜಕ್ಕೂ ವಿಶೇಷತೆ ಎನ್ನಬಹುದು.

ಒಟ್ಟಾರೆಯಾಗಿ ಪತಿಯನ್ನು ಹಿಂಬಾಲಿಸಿ ಮಹಾಸಾಧ್ವಿಯರ ಸ್ಮರಣಾರ್ಥವಾಗಿ ನೆಟ್ಟಂತಹ ಕಲ್ಲುಗಳೇ ಮಹಾಸತಿ ಕಲ್ಲುಗಳು ಎಂದು ಹೇಳಬಹುದು.

ಸತಿಸಹಗಮನ ಪದ್ಧತಿ ಸುಮಾರು 13ನೇ ಶತಮಾನದಿಂದಲೂ ಜಾರಿಯಲ್ಲಿರುವುದು ಕಂಡುಬರುತ್ತದೆ ಈ ದೃಷ್ಟಿಯಿಂದ ಕೆಲವು ಶಾಸನ ಶಿಲ್ಪಗಳಲ್ಲಿ ಮಹಾಸತಿಯ ಘಟನೆಯನ್ನು ತಿಳಿಯಲು ಸಾಂಕೇತಿಕವಾಗಿ ಕಂಬದಿಂದ ಹೊರಟ ಕೈಯನ್ನು ಚಿತ್ರಿಸಿರುತ್ತಾರೆ ಇದನ್ನು ತೊಳುಗೈ ವ್ಯಾಸನತೋಳು ಒಕ್ಕೈಮಾಸ್ತಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ ಮಹಾಸತಿಯು ಬೆಂಕಿಯ ಕೊಂಡಕ್ಕೆ ಬೀಳುವಾಗ ಎಲ್ಲರಿಗೂ ತನ್ನ ಬಲಗೈಯನ್ನು ಎತ್ತಿ ಹರಸುತ್ತಿದ್ದಳು ಅವಳ ಸಾವಿನ ನಂತರ ಅವಳು ಹರಸಿದ ಕೈಯ ರೂಪವನ್ನು ಶಿಲೆಗಳ ಮೇಲೆ ಕೆತ್ತಿ ಅವಳ ಸ್ಮಾರಕವಾಗಿ ನಿಲ್ಲಿಸುತ್ತಿದ್ದರು ಹಾಗೂ ಸತಿಯರು ಚಿತೆಯನ್ನೇರಲು ಹೋಗುವಾಗ ಕುಂಕುಮದಲ್ಲಿ ಕೈಯನ್ನು ಅದ್ದಿ ಬಾಗಿಲ ಮೇಲೆ ತಮ್ಮ ಮೋಡಿಸುತ್ತಿದ್ದರು. ಆ ಬೆರಳುಗಳನ್ನು ಅದಕ್ಕೆ ಸೇರಿದಂತೆ ತೋಳನ್ನು ಶಿಲ್ಪಗಳಲ್ಲಿ ಕೊರೆಯುತ್ತಿದ್ದರು ಎಂಬುದು ಸ್ಪಷ್ಟ ಚಿತ್ರಣ ಬಹುಶಃ ಈಗ ದೊರೆಯುವ ಮಾಸ್ತಿಗಲ್ಲುಗಳ ಮೇಲಿನ ತೋಳುಗಳು ಸಹಗಮನವನ್ನು ಮಾಡಿದ ಸ್ತ್ರೀಯ ಕೈಯ ಪಡಿಯಚ್ಚಾಗಿದ್ದರೂ ಇರಬಹುದು. ಆದರೆ ಮಹಾಸತಿಯ ಬಲಗೈ ಶುಭದ ಸೌಭಾಗ್ಯದ ಧನ್ಯ ಜೀವನದ ಸಂಕೇತ ಎಂದರೆ ತಪ್ಪಾಗಲಾರದು ಹಾಗೂ ಕೆಲವು ಮಾಸ್ತಿಕಲ್ಲುಗಳ ಮೇಲೆ ಗಂಡನ ಮತ್ತು ಅವನ ಹೆಂಡತಿಯರ ಚಿತ್ರಗಳು ಇರುವುದುಂಟು

1. **ವೀರ ಮಾಸ್ತಿಗಲ್ಲು** : ಇದು ಸುಮಾರು 3.5 ಅಡಿ ಎತ್ತರ 1.5 ಅಡಿ ಅಗಲ 5 ಇಂಚು ದಪ್ಪನಾಗಿದ್ದು. ಗ್ರಾನೈಟ್ ಶಿಲೆಯದ್ದಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದ್ದು, ಮೊದಲನೆಯ ಪಟ್ಟಿಕೆಯಲ್ಲಿ ವೀರಯೋಧನ ದಂಪತಿಗಳಿಬ್ಬರು ಒಂದು ಮಗು ಇದ್ದು ಯುದ್ಧದಲ್ಲಿ ಹೋರಾಡಿ ಹಾರವಾಗಿರುವ ದೃಶ್ಯ. ಎರಡನೆಯ ಪಟ್ಟಿಕೆಯಲ್ಲಿ ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ಯುದ್ಧದಲ್ಲಿ ಮಡಿದ ವೀರರನ್ನು ಸ್ವರ್ಗಾಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ. ಮೂರನೇ ಪಟ್ಟಿಕೆಯಲ್ಲಿ 1.5 ಅಡಿ ಶಿವಲಿಂಗವಿದ್ದು ಈ ಶಿವಲಿಂಗಕ್ಕೆ ಬಲಭಾಗದಲ್ಲಿ ಯತಿಯು ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿರುವ ದೃಶ್ಯ ಶಿವಲಿಂಗದ ಎಡ ಭಾಗದಲ್ಲಿ ನಂದಿ ಶಿಲ್ಪವನ್ನು ಕೆತ್ತಲಾಗಿದೆ. ಇದರ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ಉಬ್ಬು ಶಿಲ್ಪ ಕೆತ್ತನೆಯನ್ನು ಕಂಡರಿಸಲಾಗಿದೆ.

2. **ವೀರಗಲ್ಲು** : ಇದು 2.5 ಅಡಿ ಎತ್ತರ 1.5 ಅಡಿ ಅಗಲ 8 ಇಂಚು ದಪ್ಪನಾಗಿದ್ದು ಗ್ರಾನೈಟ್ ಶಿಲೆಯದ್ದಾಗಿದ್ದು ಒಂದು ಪಟ್ಟಿಕೆಯಿಂದ ಕೂಡಿದ್ದು ಇದರಲ್ಲಿ ಇಬ್ಬರು ವೀರರು ಆಯುಧೋಪಕರಣಗಳನ್ನು ಹಿಡಿದು ವೀರಾವೇಷದಿಂದ ಹೋರಾಡುತ್ತಿರುವ ದೃಶ್ಯವಿದ್ದು. ಈ ವೀರನ ಹಿಂಭಾಗದಲ್ಲಿ ಒಬ್ಬ ಸ್ತ್ರೀ ನಿಂತಿದ್ದಾಳೆ. ಇವಳನ್ನು ಸೇವಕಿಯೆಂದು ಪರಿಗಣಿಸಲಾಗಿದೆ. ಮೇಲ್ಭಾಗದಲ್ಲಿ ಶಿವಲಿಂಗವಿದ್ದು, ಎಡ ಭಾಗದಲ್ಲಿ ನಂದಿ ಶಿಲ್ಪ, ಬಲ ಭಾಗದಲ್ಲಿ ಭಕ್ತನು ಕುಳಿತಿರುವುದು ಕಂಡುಬಂದಿದ್ದು ಇದು ಅಸ್ಪಷ್ಟವಾಗಿದೆ.

**3. ವೀರಗಲ್ಲು** : ಇದು 2 ಅಡಿ ಎತ್ತರ 1.5 ಅಡಿ ಅಗಲ 4 ಇಂಚು ದಪ್ಪನಾಗಿದ್ದು. ಗ್ರಾನೈಟ್ ಶಿಲೆಯದ್ದಾಗಿದೆ. ಮೂರು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆಯ ಪಟ್ಟಿಕೆಯು ತೃಟಿತವಾಗಿದ್ದು. ಎರಡನೆಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವೀರ ಯೋಧನನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ದೇವಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದ್ದು, ಮೂರನೆಯ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಶಿವಲಿಂಗಕ್ಕೆ ಯತಿಯು ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿರುವುದು ಈತನ ಪಕ್ಕದಲ್ಲಿ ನಂದಿ ಶಿಲ್ಪ ಕೆತ್ತಲಾಗಿದ್ದು, ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪ ಕೆತ್ತಲಾಗಿದೆ.

**4. ಗುರಾಣಿ ವೀರಗಲ್ಲು** : ಇದು 3.5 ಅಡಿ ಎತ್ತರ 2 ಅಡಿ ಅಗಲ 4 ಇಂಚು ದಪ್ಪನಾಗಿದ್ದು, ಕಪ್ಪು ಗ್ರಾನೈಟ್ ಕಲ್ಲಿನದ್ದಾಗಿದ್ದು ಮೂರು ಪಟ್ಟಿಕೆಯಿಂದ ಕೂಡಿದೆ. ಒಂದನೆಯ ಪಟ್ಟಿಕೆಯಲ್ಲಿ ನಾಲ್ಕು ಜನ ವೀರರು ಕತ್ತಿ, ಗುರಾಣಿ, ಈಟಿ, ಭರ್ಜಿ ಇನ್ನಿತರೆ ಆಯುಧಗಳನ್ನು ಕೈಗಳಲ್ಲಿ ಹಿಡಿದು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ವೀರಾವೇಷದಿಂದ ಹೋರಾಡುತ್ತಿರುವ ದೃಶ್ಯ. ಎರಡನೆಯ ಪಟ್ಟಿಕೆಯಲ್ಲಿ ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ಯುದ್ಧದಲ್ಲಿ ಮಡಿದ ಇಬ್ಬರು ವೀರ ಯೋಧರನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ, ಮೂರನೆಯ ಪಟ್ಟಿಕೆಯಲ್ಲಿ 2 ಅಡಿ ಎತ್ತರದ ಶಿವಲಿಂಗವಿದ್ದು, ಈ ಶಿವಲಿಂಗಕ್ಕೆ ಯತಿಯು ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿರುವುದು. ಈತನ ಹಿಂಭಾಗದಲ್ಲಿ ಯುದ್ಧದಲ್ಲಿ ಮರಣ ಹೊಂದಿದ ಇಬ್ಬರು ವೀರ ಯೋಧರು ಕೈಮುಗಿದು ಕುಳಿತಿರುವುದು ಇದರ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪ ಕೆತ್ತನೆಯನ್ನು ಕಂಡರಿಸಲಾಗಿದೆ.

**5. ವೀರಗಲ್ಲು** : ಈ ವೀರಗಲ್ಲು 3.5 ಅಡಿ ಎತ್ತರ 1.5 ಅಡಿ ಅಗಲ 8 ಇಂಚು ದಪ್ಪನಾಗಿದ್ದು, ಗ್ರಾನೈಟ್ ಶಿಲೆಯದ್ದಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದೆ. ಮೊದಲನೆಯ ಪಟ್ಟಿಕೆಯಲ್ಲಿ ಇಬ್ಬರು ವೀರರು ಒಬ್ಬ ಸ್ತ್ರೀ ಮತ್ತು ಒಂದು ಮಗು ಯುದ್ಧದಲ್ಲಿ ಭಾಗಿಯಾಗಿರುವ ದೃಶ್ಯವಿದ್ದು, ಎರಡನೆಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಮಡಿದ ವ್ಯಕ್ತಿಯನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ, ಮೂರನೆಯ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಶಿವಲಿಂಗದ ಬಲ ಭಾಗದಲ್ಲಿ ಯತಿಯು ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿರುವುದು, ಎಡ ಭಾಗದಲ್ಲಿ ನಂದಿ ಶಿಲ್ಪವಿರುವುದು ಇದರ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಉಬ್ಬು ಶಿಲ್ಪ ಕಂಡರಿಸಲಾಗಿದೆ.

**6. ವೀರಗಲ್ಲು** : ಇದು 3 ಅಡಿ ಎತ್ತರ, 1.5 ಅಡಿ ಅಗಲ 8 ಇಂಚು ದಪ್ಪನಾಗಿದ್ದು, ಗ್ರಾನೈಟ್ ಶಿಲೆಯದ್ದಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದ್ದು, ಮೊದಲನೆಯ ಪಟ್ಟಿಕೆಯಲ್ಲಿ ಇಬ್ಬರು ಯುದ್ಧದಲ್ಲಿ ವೀರಾವೇಷದಿಂದ ಈಟಿ ಹಿಡಿದು ಪರಸ್ಪರ ಹೋರಾಡುತ್ತಿರುವ ದೃಶ್ಯ ವೀರರ ಹಿಂಭಾಗ ಸ್ತ್ರೀ

ನಿಂತಿರುವುದು. ಎರಡನೆಯ ಪಟ್ಟಿಕೆಯಲ್ಲಿ ಯುದ್ಧದಲ್ಲಿ ವೀರ ಯೋಧನನ್ನು ಇಬ್ಬರು ಚಾಮರಧಾರಿಣಿ ದೇವ ಕನ್ಯೆಯರು ದೇವ ಲೋಕಕ್ಕೆ ಕರೆದೊಯ್ಯುತ್ತಿರುವ ದೃಶ್ಯ, ಮೂರನೆಯ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು ಭಕ್ತನು ಶಿವ ಲಿಂಗಕ್ಕೆ ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿರುವುದು, ಶಿವಲಿಂಗದ ಎಡ ಭಾಗದಲ್ಲಿ ನಂದಿಯನ್ನು ಕೆತ್ತನೆ ಮಾಡಲಾಗಿದ್ದು, ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಉಬ್ಬು ಶಿಲ್ಪ ಕೆತ್ತಲಾಗಿದೆ.

7. **ಒಕ್ಕೈಮಾಸ್ತಿಗಲ್ಲು** : ಇದು 3.5 ಅಡಿ ಎತ್ತರ 2.5 ಅಡಿ ಅಗಲ 8 ಇಂಚು ದಪ್ಪನಾಗಿದ್ದು, ಗ್ರಾನೈಟ್ ಶಿಲೆಯದ್ದಾಗಿದೆ. ಇದು ಮೂರು ಪಟ್ಟಿಕೆಗಳಿಂದ ಕೂಡಿದ್ದು ಮೊದಲನೆಯ ಪಟ್ಟಿಕೆಯಲ್ಲಿ ನಾಲ್ಕು ಜನ ವೀರರು ಕತ್ತಿ, ಗುರಾಣಿ, ಈಟಿ ಮತ್ತು ಭರ್ಜಿಗಳನ್ನು ಹಿಡಿದು ಪರಸ್ಪರ ಜನ ಸಾಗರದಲ್ಲಿ ತೊಡಗಿರುವುದು. ಎರಡನೆಯ ಪಟ್ಟಿಕೆಯಲ್ಲಿ ಚಾಮರಧಾರಿಣಿ ದೇವಕನ್ಯೆಯರು ದೇವ ಲೋಕಕ್ಕೆ ಕರೆದೊಯ್ಯುತ್ತಿರುವುದು. ಒಂದು ಮತ್ತು ಎರಡನೆಯ ಪಟ್ಟಿಕೆಗೆ ಹೊಂದಿಕೊಂಡತೆ ಒಕ್ಕೈ ಸ್ತಂಭವನ್ನು ಕಂಡರಿಸಿದ್ದು, ಇದರ ಸಂಕೇತ ಮನೆಯ ಸದಸ್ಯರಲ್ಲಿ ಹಿರಿಯ ಮಾತೃಶ್ರೀ ಸ್ತ್ರೀ ಸ್ವರೂಪಿಯಾದವರು ಯುದ್ಧಕ್ಕೆ ಹೊರಟ ವೀರರನ್ನು ಜಯಗಳಿಸಿ ಬರಲೆಂದು ಆಶೀರ್ವದಿಸುವಂತಹ ಪದ್ಧತಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿತ್ತು. ಮೂರನೆಯ ಪಟ್ಟಿಕೆಯಲ್ಲಿ ಶಿವಲಿಂಗವಿದ್ದು, ಶಿವಲಿಂಗಕ್ಕೆ ಯತಿಯು ಪೂಜಾ ಕೈಂಕರ್ಯಗಳನ್ನು ನೆರವೇರಿಸುತ್ತಿರುವುದು ಈತನ ಹಿಂಭಾಗದಲ್ಲಿ ಯುದ್ಧದಲ್ಲಿ ಮಡಿದ ಇಬ್ಬರು ವೀರರು ಕೈಮುಗಿದು ಕುಳಿತಿರುವುದು ಶಿವಲಿಂಗದ ಎಡಭಾಗದಲ್ಲಿ ನಂದಿ ಶಿಲ್ಪವಿದ್ದು ಇದರ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಉಬ್ಬು ಶಿಲ್ಪ ಕೆತ್ತನೆ ಮಾಡಲಾಗಿದೆ.

ಒಟ್ಟಾರೆ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದಾಗ ಚಾರಿತ್ರಿಕ ಮತ್ತು ಐತಿಹಾಸಿಕ ದೃಷ್ಠಿಯಿಂದ ಆ ಪ್ರದೇಶದ ಇತಿಹಾಸ ನಿರ್ಮಿಸುವಲ್ಲಿ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು ಧಾರ್ಮಿಕ ಪ್ರಭುತ್ವವನ್ನು ಸಾಧಿಸುವಲ್ಲಿ ಯಶಸ್ವಿಯಾಗಿವೆ ಎಂಬುದು ಸ್ಪಷ್ಠ.

## ವೀರಗಲ್ಲು ಮತ್ತು ಮಾಸ್ತಿಕಲ್ಲುಗಳು



1.ವೀರಮಾಸ್ತಿಗಲ್ಲು



2.ವೀರಗಲ್ಲು



3.ವೀರಗಲ್ಲು









4.ಗುರಾಣಿ ವೀರಗಲ್ಲು 5.ವೀರಗಲ್ಲು 6.ವೀರಗಲ್ಲು 7.ಒಕ್ಕೈಮಾಸ್ತಿಗಲ್ಲು

## ಪರಾಮರ್ಶನ ಗ್ರಂಥಗಳು


1. ಸೂರ್ಯನಾಥ ಕಾಮತ್ ಯು(ಸಂ) ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–1,ಕರ್ನಾಟಕ ಸರ್ಕಾರ, ಬೆಂಗಳೂರು–1984
2. ಶೇಷಶಾಸ್ತ್ರಿ, ಆರ್– ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–2010.
3. ತಿಪ್ಪೆರುದ್ರಸ್ವಾಮಿ, ಹೆಚ್– ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು–2010
4. ಪರಶಿವಮೂರ್ತಿ. ಡಿ.ವಿ– ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ–1999.
5. ಚಿದಾನಂದಮೂರ್ತಿ,ಎಂ– ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು–2002
6. ಕನ್ನಡ ವಿಷಯ ವಿಶ್ವಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–2005
7. ಪೋಟೋದಲ್ಲಿನ ಚಿತ್ರವನ್ನು ಗಮನಿಸಿ, ಚಿತ್ರ ಸಂಖ್ಯೆ–1 ರಿಂದ 07.